# ಈ ಪರಿಯ ಸಮಾಜ ಸೇವೆ



ಪತಿ ಹತ್ವಿಗ್ ರೆನಿಂಗರ್, ಮಗಳು ಕೈಜಾ ರೆನಿಂಗರ್ ಜತೆಗೆ ಬೀಟೆ ರೆನಿಂಗರ್

ಕೆರೆಯ ನೀರನು ಕೆರೆಗೆ ಚೆಲ್ಲಿ.. ಎಂಬುದು ಸುಪ್ರಸಿದ್ಧ ದಾಸವಾಣಿ. ಇದನ್ನು ಸಮಾಜ ಸೇವೆಯ ಮೂಲಕ ಸಾಕಾರಗೊಳಿಸಲು ಹೊರಟಿರುವವರು ಜರ್ಮನಿ ಮೂಲದ ಬೀಟೆ ರೆನಿಂಗರ್. ದಾನಿಗಳಿಂದ ದತ್ತಿ ಹಣ ಸಂಗ್ರಹಿಸಿ ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿರುವ ಬಡ ಮಹಿಳೆಯರಿಗೆ ಸಹಾಯ ಮಾಡುವ ಕೆಲಸ ಇವರದು.

ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಬೀಟೆ ರೆನಿಂಗರ್ ಚಾರಿಟೆಬಲ್ ಸಂಸ್ಥೆಯೊಂದನ್ನು ಸ್ಥಾಪಿಸಿ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುವುದು, ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವುದು, ಸಂಕಷ್ಟದಲ್ಲಿರುವ ಗ್ರಾಮೀಣ ಮಹಿಳೆಯರಿಗೆ ಸಹಾಯಹಸ್ತ ಚಾಚುವಂತಹ ಕೆಲಸ ಮಾಡುತ್ತಿದ್ದಾರೆ. ಇದಕ್ಕಾಗಿ ಹಣ ಸಂಗ್ರಹಿಸಲು ಅವರು ಆಗಾಗ ದೇಶದ ನಾನಾ ಭಾಗಗಳಲ್ಲಿ ದತ್ತಿ ಕಾರ್ಯಕ್ರಮ ನಡೆಸುತ್ತಾರೆ. 'ಮ್ಯಾಮೊಮೊಬೈಲ್ ಚಾರಿಟೆಬಲ್ ಟ್ರಸ್ಟ್' ಎಂಬ ಈ ಸಂಸ್ಥೆಯಲ್ಲಿ ಒಂಬತ್ತು ಮಂದಿ ಸದಸ್ಯರಿದ್ದು ಬೀಟೆ ರೆನಿಂಗರ್ ಇದರಲ್ಲಿ ಬಿಸಿನೆಸ್ ಕೋಚ್ ಆಗಿದ್ದಾರೆ.

'ಸಮಾಜ ಸೇವೆಯ ಮೂಲಕ ಭಾರತ-ಜರ್ಮನಿ ನಡುವೆ ಸಾಮಾಜಿಕ ಬಾಂಧವ್ಯ ಬೆಳೆಸುವುದು ಇದರ ಉದ್ದೇಶ. 2012ರಲ್ಲಿ ಅಸ್ತಿತ್ವಕ್ಕೆ ಬಂದ ಈ ಚಾರಿಟೆಬಲ್ ಟ್ರಸ್ಟ್ ಕರ್ನಾಟಕ ಮತ್ತು ತಮಿಳುನಾಡಿನ ಗ್ರಾಮೀಣ ಭಾಗಗಳಲ್ಲಿ ಸ್ತನ ಕ್ಯಾನ್ಸರ್ ತಡೆಗಟ್ಟುವಿಕೆ, ಪತ್ತೆ ಹಚ್ಚುವಿಕೆ ಮತ್ತು ಚಿಕಿತ್ಸೆಯ ನಿಟ್ಟಿನಲ್ಲಿ ಕೆಲಸ ಮಾಡುತ್ತದೆ. ಇದಕ್ಕಾಗಿ ಸುಸಜ್ಜಿತ ಔಷಧಿ, ತಾಂತ್ರಿಕ ತಜ್ಞರು, ರೇಡಿಯಾಲಜಿಸ್ಟ್, ವೈದ್ಯರು, ನರ್ಸ್‌ಗಳನ್ನೊಳಗೊಂಡ ಸಂಚಾರಿ ಬಸ್, ವ್ಯಾನ್‌ಗಳ ಮೂಲಕ ಹಳ್ಳಿ ಹಳ್ಳಿಗೆ ಹೋಗಿ ಕ್ಯಾನ್ಸರ್ ಇರುವ ಮಹಿಳೆಯರಿಗೆ ಸಹಾಯ ಮಾಡುತ್ತದೆ' ಎಂದು ವಿವರ ನೀಡುತ್ತಾರೆ ಇವರು. ಕಳೆದ 14 ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿರುವ ಬೀಟೆ ಬೆಂಗಳೂರಿಗೆ ಬಂದದ್ದು 2012ರಲ್ಲಿ.

ಬೀಟೆ ರೆನಿಂಗರ್ ಓದಿದ್ದು ಆರೋಗ್ಯ ಮತ್ತು ಸಮಾಜ ಸೇವೆಗೆ ಸಂಬಂಧಿಸಿದ ವಿಷಯದ (social pedagogy) ಸ್ನಾತಕೋತ್ತರ ಪದವಿ. ಇವರ ಪತಿ ಹತ್ವಿಗ್ ರೆನಿಂಗರ್ ಅವರು ಮರ್ಸಿಡಿಸ್ ಬೆಂಜ್ ರಿಸರ್ಚ್ ಡೆವಲಪ್‌ಮೆಂಟ್ ಇಂಡಿಯಾ ಕಂಪೆನಿಯಲ್ಲಿ ಎಂಜಿನಿಯರ್ ಆಗಿದ್ದಾರೆ. ಎಂಟು ವರ್ಷದ ಮಗಳು ಕೈಜಾ ರೆನಿಂಗರ್ ಬೆಂಗಳೂರಿನಲ್ಲೇ ಇಂಟರ್‌ನ್ಯಾಷನಲ್ ಸ್ಕೂಲ್ ಒಂದರಲ್ಲಿ ಮೂರನೆ ತರಗತಿ ಓದುತ್ತಿದ್ದಾಳೆ.

ಹಾಗೆ ನೋಡಿದರೆ ರೆನಿಂಗರ್ ಬೆಂಗಳೂರಿಗೆ ಬರುವುದಕ್ಕೆ ಮೊದಲೇ ಅವರಿಗೆ ಭಾರತೀಯ ಸಂಸ್ಕೃತಿಯ ಬಗ್ಗೆ ಸಾಕಷ್ಟು ತಿಳಿದಿತ್ತಂತೆ. ಅದು ಹೇಗೆ ಎಂದು ಕೇಳಿದರೆ 'ಜರ್ಮನಿಯಲ್ಲಿದ್ದಾಗ ನನ್ನ ಅತ್ತೆ ಭಾರತೀಯನನ್ನೇ ಮದುವೆಯಾದರು. ಅವರು ನಮ್ಮ ಜತೆಯಲ್ಲೇ ಇದ್ದರು. ನಾನು ಅವರ ಜತೆಯಲ್ಲೇ ಬೆಳೆದೆ. ಹೀಗಾಗಿ ಇಲ್ಲಿನ ಸಂಸ್ಕೃತಿ, ಭಾಷಾ ವೈವಿಧ್ಯ, ಆಹಾರ ಪದ್ಧತಿ ಬಗ್ಗೆ ಮೊದಲೇ ತಿಳಿದಿತ್ತು. ಇಲ್ಲಿನ ಜೀವನಶೈಲಿ ಜರ್ಮನಿಗಿಂತ ತುಂಬ ವಿಭಿನ್ನವಾದದ್ದು. ಅಲ್ಲಿಗೂ ಇಲ್ಲಿಗೂ ಹೋಲಿಸುವ ಹಾಗೆಯೇ ಇಲ್ಲ' ಎನ್ನುತ್ತಾರೆ.

ಬೆಂಗಳೂರಿನಲ್ಲಿ ವಾಸವಿದ್ದರೂ ರೆನಿಂಗರ್ ಜರ್ಮನಿಯೊಂದಿಗೆ ಸದಾ ಸಂಪರ್ಕದಲ್ಲೇ ಇರುತ್ತಾರೆ. ಇಂಟರ್‌ನ್ಯಾಷನಲ್ ಬಿಸಿನೆಸ್ ಕೋಚ್ ಆಗಿ ಕೆಲಸ ಮಾಡುವ ಕಾರಣ ಆಗಾಗ ಜರ್ಮನಿಗೆ ಹೋಗುತ್ತಿರುತ್ತಾರೆ.

'ಬೆಂಗಳೂರಿಗರ ಭಾಷೆ, ಸಂಸ್ಕೃತಿ, ಸಂಪ್ರದಾಯ, ಆಹಾರ ಕ್ರಮ, ಜೀವನಶೈಲಿ ಅತ್ಯಂತ ವಿಭಿನ್ನವಾದದ್ದು. ಇಲ್ಲಿನ ಜನ ಬೇಗ ಸ್ನೇಹಿತರಾಗುತ್ತಾರೆ. ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವ, ಪ್ರೀತಿಯಿಂದ ಮಾತನಾಡಿಸುವ ದೊಡ್ಡ ಗುಣ ಇಲ್ಲಿ ಕಂಡಿದ್ದೇನೆ. ಇಲ್ಲಿನ ಜನರ ತಾಳ್ಮೆ ನೋಡಿದರೆ ಆಶ್ಚರ್ಯವಾಗುತ್ತದೆ. ನಾನು ತಿಳಿದ ಮಟ್ಟಿಗೆ ಭಾರತದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಎಲ್ಲ ಧರ್ಮದವರೂ ಹಲವಾರು ಹಬ್ಬಗಳನ್ನು ಆಚರಿಸುತ್ತಾರೆ. ಹಬ್ಬದ ಊಟಕ್ಕೆ, ಆಚರಣೆಗೆ ಇಲ್ಲಿ ಕರೆದಲ್ಲೆಲ್ಲಾ ಹೋಗುತ್ತೇವೆ. ಹಬ್ಬದ ಆಚರಣೆಯ ಮಹತ್ವ, ಹಿನ್ನೆಲೆ ತಿಳಿದುಕೊಳ್ಳುವುದರಲ್ಲಿ ನನಗೆ ಬಹಳ ಆಸಕ್ತಿ ಇದೆ. ಈಗ್ಗೆ ಕೆಲ ದಿನಗಳ ಹಿಂದೆ ಕೇರಳದ ಓಣಂ ಹಬ್ಬಕ್ಕೆ ಯಾರೋ ಕರೆದಿದ್ದರು. ತುಂಬ ಚೆನ್ನಾಗಿ ಆಚರಿಸಿದ್ರು. ಊಟದಲ್ಲೂ ಸಾಕಷ್ಟು ವೈವಿಧ್ಯ ಇತ್ತು' ಎನ್ನುತ್ತಾರೆ ಇವರು.

### ಭಾಷೆ ಕುತೂಹಲಕರ

'ಇಲ್ಲಿನ ಭಾಷೆ, ಸಂಸ್ಕೃತಿ ಬಗ್ಗೆ ತಿಳಿದುಕೊಳ್ಳುವ ಕುತೂಹಲವಿದೆ. ನಾವು ಮನೆಯಲ್ಲಿ ಜರ್ಮನ್ ಭಾಷೆ ಮಾತನಾಡುತ್ತೇವೆ. ಬಾಕಿ ಎಲ್ಲ ವ್ಯವಹಾರ, ಮಾತುಗಳೂ ಇಂಗ್ಲಿಷ್‌ನಲ್ಲೇ ಹೆಚ್ಚು. ಈ ದೇಶದ ಹಿಂದಿ, ತಮಿಳು, ಕನ್ನಡ ಭಾಷೆ ಕೇಳಲು ಸೊಗಸಾಗಿರುತ್ತದೆ. ಹಿಂದಿ ಭಾಷೆಯನ್ನು ದೇಶದ ನಾನಾ ರಾಜ್ಯದ ಜನರು ಆಡುವುದನ್ನು ಕೇಳಿದ್ದೇನೆ. ಇಂಗ್ಲಿಷ್ ಬಿಟ್ಟು ಬೇರೆ ಯಾವುದೇ ಭಾಷೆ ಮಾತನಾಡಲು ಬರದಿದ್ದರೂ ಕನ್ನಡ, ಹಿಂದಿ,ತಮಿಳು ಭಾಷೆಗಳ ಉಚ್ಚಾರ ನೋಡಿ ಆಯಾಯ ಭಾಷೆಗಳನ್ನು ಗುರುತಿಸಬಲ್ಲೆ. ಕನ್ನಡ ಭಾಷೆಯೂ ಕೇಳಲು ಚೆನ್ನಾಗಿದೆ ಎಂದು ಭಾಷೆಯ ಬಗ್ಗೆ ಮಾತನಾಡುತ್ತಾರೆ ಇವರು. 'ನಾವು ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ನರು. ದೇವರ ಮೇಲೆ ನಂಬಿಕೆ ಇದೆ. ಕ್ರಿಶ್ಚಿಯನ್ ಹಬ್ಬಗಳ ಆಚರಣೆಗಳನ್ನೂ ಮಾಡುತ್ತೇವೆ. ಹಬ್ಬಕ್ಕೆ ಯಾರಾದರೂ ಕರೆದರೆ ಕುಟುಂಬ ಸಮೇತ ಹೋಗಿ ಭಾಗವಹಿಸುವುದೂ ಇದೆ ಎನ್ನುತ್ತಾರೆ ಇವರು.

'ಭಾರತದ, ಕರ್ನಾಟಕ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ್ದೇವೆ. ವಾರಾಂತ್ಯದಲ್ಲಿ ಹಾಗೂ ಕೆಲವು ಸಲ ಬಿಡುವು ಮಾಡಿಕೊಂಡು ಕರ್ನಾಟಕದ ಅನೇಕ ಜಲಪಾತಗಳನ್ನು ನೋಡಿದ್ದೇವೆ. ಮಹಾಬಲಿಪುರಂ, ಪಾಂಡಿಚೇರಿ, ಚೆನ್ನೈ, ಕೇರಳ, ಮುಂಬಯಿ, ಹರಿದ್ವಾರ, ದೆಹಲಿ, ಆಗ್ರಾ, ಜೈಪುರಗಳನ್ನು ನೋಡಿದ್ದೇವೆ. ಹಂಪೆ, ಅಜಂತಾ, ಎಲ್ಲೋರ ಗುಹೆಗಳನ್ನು ನೋಡಿ ಆಗಿದೆ. ಎಲ್ಲ ಜಾಗಗಳೂ ಬಹಳ ಅದ್ಭುತವಾಗಿವೆ ಎಂದು ವರ್ಣಿಸುತ್ತಾರೆ.

ಬೆಂಗಳೂರಿನಲ್ಲಿ ವಾರಾಂತ್ಯದಲ್ಲಿ ಹೆಚ್ಚಾಗಿ ಪಾರ್ಟಿ, ಡಿನ್ನರ್‌ಗಳಿಗೆಂದು ಹೊರಗೆ ಹೋಗುತ್ತೇವೆ. ಕುಟುಂಬ ಸಮೇತ ಪ್ರವಾಸ ಮಾಡುವುದೂ ಇದೆ. ಇಲ್ಲಿ ಅನೇಕ ಗೆಳೆಯರಿದ್ದಾರೆ. ಜರ್ಮನಿಯಿಂದ ಬಂದ ಸಾಕಷ್ಟು ಮಂದಿ ಇಲ್ಲೇ ನೆಲೆಸಿದ್ದಾರೆ. ಅವರ ಮನೆಗಳಿಗೂ ಹೋಗುತ್ತಿರುತ್ತೇವೆ. ಮನೆಯಲ್ಲಿ ನಾನೇ ಅಡುಗೆ ಮಾಡುತ್ತೇನೆ. ವಿದೇಶಿ ಮತ್ತು ಸ್ಥಳೀಯ ಎರಡೂ ಶೈಲಿಯ ಅಡುಗೆ, ಊಟ ನಮಗಿಷ್ಟ.

■ ಅವನೀಶ್